*C.C.*
*22766/2024*
*P W-1*

**ಸಾಕ್ಷಿಯನ್ನು ದಿನಾಂಕ 24.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಮತ್ತು ಆರೋಪಿಯು ಸಾರಕ್ಕಿ ಸುಬ್ಬಮ್ಮ ಸರ್ಕಲ್ ನಲ್ಲಿ ಒಂದೇ ಕಟ್ಟಡದಲ್ಲಿದ್ದೆವು. ಸದರಿ ಕಟ್ಟಡದಲ್ಲಿ ನಾನು ರೂ.6,000/-ಕ್ಕೆ ಬಾಡಿಗೆಗೆ ಇದ್ದೆ. ನನಗೆ ತಿಂಗಳಿಗೆ ಒಂದು ಲಕ್ಷದಿಂದ ಒಂದುವರೆ, ಎರಡು ಲಕ್ಷದವರೆಗೂ ಯಾವ ರೀತಿ ಗ್ರಾಹಕರನ್ನು ಹಿಡಿಯುತ್ತೇನೋ ಆ ರೀತಿ ಸಂಪಾದನೆ ಇರುತ್ತದೆ, ಒಂದೊಂದು ಸಾರಿ ಸಂಪಾದನೆ ಇರುವುದಿಲ್ಲ. ನಾನು 25ವರ್ಷಗಳಿಂದ ಗ್ರಾನೈಟ್ ಬಿಸಿನೆಸ್ ಮಾಡುತ್ತೇನೆ. ನನಗೆ 45ವರ್ಷ. ನಾನು 6ನೇ ತರಗತಿ ಓದಿದ್ದೇನೆ. ನಮ್ಮ ತಾತನ ಕಾಲದಿಂದಲೂ ಗ್ರಾನೈಟ್ ಬಿಸಿನೆಸ್ ಮಾಡುತ್ತಿದ್ದೇವೆ. ನನ್ನ ವಾರ್ಷಿಕ ಆದಾಯ ಸುಮಾರು ಹತ್ತು ಲಕ್ಷದವರೆಗೆ ಇದೆ.

6. ನನಗೆ ಇಬ್ಬರು ಮಕ್ಕಳು. ಮಗಳು 9ನೇ ತರಗತಿ, ಮಗ 6ನೇ ತರಗತಿ. ವಂಶಪಾರಂಪರ್ಯವಾಗಿ ಬೆಂಗಳೂರಿನಲ್ಲಿ ವಾಸ. ವಂಶಪಾರಂಪರ್ಯವಾಗಿ ಗ್ರಾನೈಟ್ ಬಿಸಿನೆಸ್ ಮಾಡಿಕೊಂಡಿದ್ದು ಎಷ್ಟು ಆಸ್ತಿ ಮಾಡಿಕೊಂಡಿದ್ದೀರಾ ಎಂದರೆ ಇರಲು ಮನೆ ಮಾಡಿಕೊಂಡಿದ್ದೇವೆ. ಅದು ನಮ್ಮ ತಂದೆಯ ಹೆಸರಿನಲ್ಲಿದೆ, ನನ್ನ ಹೆಸರಿನಲ್ಲಿಲ್ಲ. ಒಂದು ತಿಂಗಳಿಗೆ ಒಂದು ಲಕ್ಷ ಸಂಪಾದನೆ 25ವರ್ಷಗಳಿಂದ ಸಂಪಾದನೆ ಮಾಡಿದ್ದರೆ ಆಸ್ತಿಯನ್ನು ಮಾಡಲು ಯಾವುದೇ ತೊಂದರೆ ಇರುತ್ತಿರಲಿಲ್ಲ ಎಂದರೆ ಮಕ್ಕಳ ಖರ್ಚು, ನಮ್ಮ ಆರೋಗ್ಯದ ಖರ್ಚು ಹಾಗೂ ಮನೆಯ ಖರ್ಚು ಇದರಿಂದ ಹಣ ಉಳಿಸಲು ಆಗಲಿಲ್ಲ. ನನ್ನ ಮಕ್ಕಳು ಆಕ್ಸ್ ಫರ್ಡ್ ಶಾಲೆಯಲ್ಲಿ ಓದುತ್ತಿದ್ದಾರೆ, ಅವರ ಶಾಲೆಯ ವಾರ್ಷಿಕ ಶುಲ್ಕ ರೂ.38,000/-. ನನಗೆ ಆದಾಯಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಲಯಕ್ಕೆ ಯೂವುದೇ ದಾಖಲೆಗಳನ್ನು ಕೊಟ್ಟಿಲ್ಲ,

7. ಎಸ್ ಎಂ ಗ್ರಾನೈಟ್ ಎಂಬ ಹೆಸರಿನಲ್ಲಿ ಸಾರಕ್ಕಿಯಲ್ಲಿ ಸುಮಾರು 35ವರ್ಷಗಳಿಂದ ಬಾಡಿಗೆಗೆ ನಡೆಸುತ್ತಿದ್ದೇವೆ. ನಮ್ಮ ತಾತ, ತಂದೆ ತದನಂತರ ನಾನು ನೋಡಿಕೊಳ್ಳುತ್ತಿದ್ದೇನೆ.

8. ಆರೋಪಿಯು ಮತ್ತು ನಾವು ಅಕ್ಕಪಕ್ಕದವರ ಮನೆಯವರಾದ ಕಾರಣ ನನಗೂ ಮತ್ತು ನನ್ನ ಹೆಂಡತಿಗೂ ಪರಿಚಯ. ನನಗೆ ಮತ್ತು ಆರೋಪಿಗೂ ಯಾವುದೇ ನೇರವಾದ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಅನುಸೂಯ ಮತ್ತು ಆರೋಪಿ ಕೆಲಸ ಮಾಡುತ್ತಿದ್ದಂತಹ ಮಾಲೀಕ ದೀಪ ಗೌಡರಿಗೆ ಪರಿಚಯ ಎಂದರೆ ಸರಿಯಲ್ಲ. ನನ್ನ ಹೆಂಡತಿ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಚೀಟಿ ವ್ಯವಹಾರಕ್ಕೆ ಸಂಬಂಧಿಸಿದ ಹಾಗೆ ದೀಪ ಗೌಡರನ್ನು ನನ್ನ ಹೆಂಡತಿಗೆ ಪರಿಚಯ ಮಾಡಿಸಿಕೊಟ್ಟರು ಎಂದರೆ ಸರಿಯಲ್ಲ. ದೀಪ ಗೌಡ ಅವರು ನನ್ನ ಹೆಂಡತಿ ಬಳಿ ಚೀಟಿ ಹಾಕಿದ್ದರು ಎಂದರೆ ಸರಿಯಲ್ಲ.

ದೀಪ ಗೌಡ ಅವರು ಮೃತಪಟ್ಟರು ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ದೀಪ ಗೌಡ ಅವರು ಮೃತಪಟ್ಟ ನತಂರ ಅವರ ಚೀಟಿ ಎತ್ತಿರುವ ಹಣ ಬಾಕಿ ಇದೆ ಎಂದು ಹಣ ನೀಡಲು ಆರೋಪಿಯನ್ನು ನಾನು ಮತ್ತು ನನ್ನ ಹೆಂಡತಿಯು ಒತ್ತಾಯಿಸಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ನನ್ನ ಬಳಿ ಮಾತನಾಡಿರುವ ಆಡಿಯೋ ಮತ್ತು ವಿಡಿಯೋ ಇದೆ ಎಂದು ನುಡಿದಿದ್ದು ಅದನ್ನು ನ್ಯಾಯಾಲಯಿಕ್ಕೆ ಕೊಡಲು ತೊಂದರೆ ಇಲ್ಲ.

8. ಆರೋಪಿ ವಿಜಯಲಕ್ಷ್ಮಿ ಅವರು ಪರಿಯವಿರುವ ಕಾರಣ ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿದೆ ಎಂದರೆ ಹೌದು. ಆರೋಪಿಯ ಗಂಡ ಚಾಲಕ. 2018ರ ಡಿಸೆಂಬರ್ ನಲ್ಲಿ ಆರೋಪಿ ನನ್ನನ್ನು ಐದು ಲಕ್ಷ ಹಣ ಕೇಳಿದರು. ಪಿರ್ಯಾದಿಯಲ್ಲಿ ಬರೆದಿರುವ ವಿಚಾರವನ್ನು ನಾನು ಓದಿ ತಿಳಿದು ಸಹಿ ಮಾಡಿಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ಹಾಗಾದರೆ ಪಿರ್ಯಾದಿಯಲ್ಲಿ ಇರುವ ವಿಚಾರಗಳು ಓದಿ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ತಿಳಿದುಕೊಂಡಿಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**

*C.C. 22766/2024*
*P W-1*